ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಉಚಿತ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಲಾಗಿರುವ ನೀರಾವರಿ ಪಂಪ್ ಸೆಟ್‌ಗಳೆಷ್ಟು?

ಆ) ರೈತರ ಪರವಾಗಿ ಕೆ. ಇ. ಬಿ.ಗೆ ಸರ್ಕಾರ ನೀಡಲಾಗುತ್ತಿರುವ ಒಟ್ಟು ಮೊತ್ತವೆಷ್ಟು?

ಇ) ಮಾಗಡಿ ತಾಲ್ಲೂಕಿನಲ್ಲಿ ಉಚಿತವಾಗಿ ಒದಗಿಸಲಾಗಿರುವ ವಿದ್ಯುಚ್ಛಕ್ತಿ ನೀರಾವರಿ ಪಂಪ್‌ಸೆಟ್‌ಗಳೆಷ್ಟು? ಹಾಗೇ ವಿದ್ಯುಚ್ಛಕ್ತಿ ಸಂಪರ್ಕ ಕೋರಿ ಬಂದಿರುವ ಅರ್ಜಿಗಳೆಷ್ಟು? ಯಾವಾಗ ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲಾಗುವುದು?

ಈ) ಸರ್ಕಾರದ ಸೌಲಭ್ಯಗಳನ್ನು ಮುಂದುವರಿಸಿಕೊಂಡು ಹೋಗುವುದು ಉಚಿತವಲ್ಲವೇ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ತಾರೀಖು 30-11-1992ರ ಅಂತ್ಯದವರೆಗೆ ರಾಜ್ಯದಲ್ಲಿ 1,52,313 ನೀರಾವರಿ ಪಂಪ್‌ಸೆಟ್ಟುಗಳಿಗೆ ಉಚಿತವಾಗಿ ವಿದ್ಯುಚ್ಛಕ್ತಿ ಒದಗಿಸಲಾಗಿದೆ.

ಆ) ಗ್ರಾಮಾಂತರ ವಿದ್ಯುದ್ದೀಕರಣ ಮತ್ತು ನೀರಾವರಿ ಪಂಪ್‌ಸೆಟ್‌ಗಳ ಸಹಾಯಧನವಾಗಿ ಸರ್ಕಾರವು 1991-92 ನೇ ಸಾಲಿಗೆ 65 ಕೋಟಿ ರೂಪಾಯಿಗಳನ್ನು ಮಂಡಳಿಗೆ ನೀಡಿರುತ್ತದೆ.

ಇ) ಮಾಗಡಿ ತಾಲ್ಲೂಕಿನಲ್ಲಿ ಉಚಿತವಾಗಿ ಒದಗಿಸಲಾಗಿರುವ ವಿದ್ಯುತ್ ನೀರಾವರಿ ಪಂಪ್‌ಸೆಟ್ಟುಗಳ ಸಂಖ್ಯೆ 353. ಹೊಸದಾಗಿ ವಿದ್ಯುತ್‌ಚ್ಛಕ್ತಿ ಸಂಪರ್ಕ ಕೋರಿ 1992-93 ರ ಫೆಬ್ರವರಿ 1993ರ ಅಂತ್ಯದವರೆಗೆ ಬಂದಿರುವ ಅರ್ಜಿ ಸಂಖ್ಯೆ 411. ಇವುಗಳ ಪೈಕಿ, 1992-93ರ ಫೆಬ್ರವರಿ ಅಂತ್ಯದವರೆಗೆ ಒಟ್ಟು ವಿದ್ಯುತ್ ಸಂಪರ್ಕ ಕಲ್ಪಿಸಲಾದ ನೀರಾವರಿ ಪಂಪ್‌ಸೆಟ್ಟುಗಳು 323. ಬಾಕಿ ಉಳಿದ ಅರ್ಜಿಗಳಿಗೆ ಸರ್ಕಾರ ಅಂಗೀಕರಿಸಿರುವ ರೋಸ್ಟರ್ ನಿಯಮವನ್ನು ಅನುಸರಿಸಿ ಹಂತ ಹಂತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

ಈ) ಸರ್ಕಾರವು ಇದನ್ನು ಪರಿಶೀಲಿಸುವುದು.

ವಿಷಯ : ಸೋಮವಾರ ಪೇಟೆ ತಾಲ್ಲೂಕಿನಲ್ಲಿ 100 ವರ್ಷಗಳ ಹಿಂದೆ ಕಟ್ಟಲಾಗಿರುವ ಸೇತವೆಗಳ ಬದಲಿಗೆ ಹೊಸ ಸೇತುವೆಗಳು

Q : 570

ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಹಟ್ಟಿ ಹೊಳೆ ಸೇತುವೆ, ಮಾದಪುರ ಸೇತುವೆ, ಕುಶಾಲನಗರ ಸೇತವೆ, ಹುದಗೂರು ಸೇತುವೆ, ಶನಿವಾರಸಂತೆ ಸೇತುವೆ, ಬಾಳಗೋಡು ಸೇತುವೆಗಳು 100 ವರ್ಷಗಳ ಹಿಂದೆ ನಿರ್ಮಿತವಾದವು ಎಂಬುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ, ಅವುಗಳನ್ನು ಕೆಡವಿ ಬದಲೀ ಸೇತುವೆಗಳನ್ನು ಯಾವಾಗ ನಿರ್ಮಾಣ ಮಾಡಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ತಿಳಿದಿದೆ.

ಆ) ಈ ಕಾಮಗಾರಿಗಳ ಅಗತ್ಯತೆಯನ್ನು ಗಮನದಲ್ಲಿರಿಸಿಕೊಂಡು, ಆಯವ್ಯಯದಲ್ಲಿ ಅಥವಾ ಯಾವುದಾದರೂ ಯೋಜನೆಯಡಿ ಸೇರಿಸಿ ಮಂಜೂರಾದೊಡನೆ ಮತ್ತು ಅನುದಾನದ ಹಣವು ಲಭ್ಯವಾದ ಕೂಡಲೇ ಪುನರ್ ನಿರ್ಮಾಣ ಕೆಲಸವನ್ನು ಹಂತ ಹಂತವಾಗಿ ಕ್ರಮ ಕೈಗೊಳ್ಳಲು ಯೋಜಿಸಲಾಗಿದೆ.

ವಿಷಯ : ಮಹಾಲಕ್ಷ್ಮೀ ಲೇಔಟ್ ಎರಡನೆಯ ಹಂತದಲ್ಲಿ ಬೀದಿ ದೀಪ

Q : 439

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾಲಕ್ಷ್ಮೀ ಲೇಔಟ್ ಎರಡನೆಯ ಹಂತ ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ಗೆ ಬೀದಿ ದೀಪ ಹಾಕಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ಹಣ ತುಂಬಿರುವುದು?

ಆ) ಮೆಲ್ಕಂಡ ಕೆಲಸಕ್ಕೆ ತುಂಬಿ ಎಷ್ಟು ದಿವಸವಾಯಿತು?

ಇ) ಮೇಲ್ಕಂಡ ಬಡಾವಣೆಗಳಿಗೆ ಬೀದಿ ದೀಪ ಹಾಕಲಾಗಿದೆಯೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮಹಾಲಕ್ಷ್ಮಿ ಲೇಔಟ್ ಎರಡನೆಯ ಹಂತಕ್ಕೆ ರೂ. 3,83,970 ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ಗೆ ರೂ. 48,80,720 ಹಣವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಂಡಳಿಗೆ ಸಹಾಯ ಮಾಡಿದೆ.

ಆ) ಮಹಾಲಕ್ಷ್ಮಿ ಲೇಔಟ್ ಎರಡನೇ ಹಂತದ ಬೀದಿ ದೀಪದ ಕೆಲಸಗಳಿಗೆ ಹಣ ತುಂಬಿ ಸುಮಾರು ಎರಡು ವರ್ಷ ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್ ಬೀದಿ ದೀಪದ ಕೆಲಸಗಳಿಗೆ ಹಣ ತುಂಬಿ ಕೇವಲ ಒಂದು ತಿಂಗಳು ಸಂದಿದೆ.

ಇ) ಮಹಾಲಕ್ಷ್ಮಿ ಲೇಔಟ್ ಎರಡನೇ ಹಂತದ ಲೈನ್ ಕೆಲಸಗಳು ಮುಗಿದಿದ್ದು ಸದ್ಯದಲ್ಲೇ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು. ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ನ ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಆದಷ್ಟು ಜಾಗ್ರತೆ ಕೆಲಸವನ್ನು ಮುಗಿಸಲಾಗುವುದು.

ವಿಷಯ : ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳಿಂದ ಬರುವ ವರಮಾನ.

Q : 171

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ